4) ಗಂಗಾ ಕಲ್ಯಾಣ ಯೋಜನೆ

5) ಶ್ರಮಶಕ್ತಿ ಯೋಜನೆ

6) ಭೂ ಖರೀದಿ ಯೋಜನೆ

7) ರಾಷ್ಟ್ರೀಯ ಅಲ್ಪಸಂಖ್ಯಾತರ ಮತ್ತು ಹಣಕಾಸು ನಿಗಮದಿಂದ ಸಾಲವನ್ನು ಪಡೆದು ರಾಜ್ಯದ ಮತೀಯ ಅಲ್ಪಸಂಖ್ಯಾತರಿಗೆ ನೇರಸಾಲ ಯೋಜನೆಯಡಿಯಲ್ಲಿ ಸಾಲವನ್ನು ಕಲ್ಪಿಸಲಾಗುತ್ತಿದೆ.

1906 (2282) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) :– ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಶ್ರೀ ಕ್ಷೇತ್ರಗಳೆಂದು ಗುರುತಿಸಲ್ಪಟ್ಟಿರುವ ಸ್ಥಳಗಳು ಯಾವುವು; (ತಾಲ್ಲೂಕಾವಾರು ವಿವರ ನೀಡುವುದು)

ಆ) ಈ ಕ್ಷೇತ್ರಗಳಿಗಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು;

ಇ) ಈ ಕ್ಷೇತ್ರಗಳಲ್ಲಿ ಕೈಗೊಂಡಿರುವ ಕಾಮಗಾರಿಗಳೇನು;

ಈ) ಶ್ರೀ ಕ್ಷೇತ್ರವೆಂದು ಘೋಷಿಸಬೇಕಾದರೆ ಇರುವ ಮಾನದಂಡಗಳೇನು;

ಉ) ಕೂಡ್ಲಿಗಿ ತಾಲ್ಲೂಕಿನ ಉಜ್ಜಯಿನಿ ಗ್ರಾಮವನ್ನು ಶ್ರೀ ಕ್ಷೇತ್ರವೆಂದು ಘೋಷಿಸಲಾಗಿದೆಯೇ;

ಊ) ಹಾಗಿದ್ದಲ್ಲಿ ಈ ಗ್ರಾಮದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು;

ಋ) ಹಾಗಿದ್ದಲ್ಲಿ ಬಿಡುಗಡೆಯಾದ ಅನುದಾನ ಎಷ್ಟು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು):

ಅ) ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 1294 ಸಂಸ್ಥೆಗಳನ್ನು ಅಧಿಸೂಚಿತ ಸಂಸ್ಥೆಗಳೆಂದು ಪ್ರಕಟಿಸಲಾಗಿರುತ್ತದೆ. ಜಿಲ್ಲೆಯಲ್ಲಿರುವ ಈ ಕೆಳಕಂಡ ಸಂಸ್ಥೆಗಳನ್ನು ಶ್ರೀ ಕ್ಷೇತ್ರವೆಂದು ಕರೆಯುವ ಪ್ರತೀತ ಇರುತ್ತದೆ.

1) ಶ್ರೀ ವಿರೂಪಾಕ್ಷೇಶ್ವರ ದೇ. ಹಂಪಿ, ಹೊಸಕೋಟೆ ತಾಲ್ಲೂಕು

2) ಶ್ರೀ ಗುರುಬಸವೇಶ್ವರ ದೇ. ಕೊಟ್ಟೂರು, ಕೂಡ್ಲಿಗಿ ತಾಲ್ಲೂಕು

3) ²æà ¸ÀzÀAPÀvÀ(ಕುಮಾರಸ್ವಾಮಿ ದೇವಸ್ಥಾನ) ಸಂಡೂರು, ಸಂಡೂರು (ತಾ)

4) ಶ್ರೀ ಮಲ್ಲಿಕಾರ್ಜುನ ದೇ. ಕುರವತ್ತಿ, ಹೂವಿನ ಹಡಗಲಿ (ತಾ)

5) ಶ್ರೀ ಮೈಲಾರ ಲಿಂಗೇಶ್ವರ ದೇ. ಹೂವಿನ ಹಡಗಲಿ (ತಾ)

6) ಶ್ರೀ ಮರುಳು ಸಿದ್ಧೇಶ್ವರ ದೇ. ಉಜ್ಜಯಿನಿ, ಕೊಟ್ಟೂರು

7) ಶ್ರೀ ಗುರುಬಸವೇಶ್ವರ ದೇ. ಕೊಟ್ಟೂರು, ಕೂಡ್ಲಿಗಿ (ತಾ)

8) ಶ್ರೀ ಉಚ್ಚಂಗಮ್ಮ (ಶ್ರೀ ಉಚ್ಚಂಗಿ ದುರ್ಗಮ್ಮ) ದೇ. ಉಜ್ಜಯಿನಿ, ಕೂಡ್ಲಗಿ ತಾಲ್ಲೂಕು.

ಆ) ಈ ಕ್ಷೇತ್ರಗಳಿಗಾಗಿ ಯಾವುದೇ ಅನುದಾನ ನಿಗದಿ ಪಡಿಸಿರುವುದಿಲ್ಲ. ಆದರೆ ಬಳ್ಳಾರಿ ಜಿಲ್ಲೆಗೆ 2006–07 ನೇ ಸಾಲಿಗೆ 92 ದೇವಸ್ಥಾನಗಳಿಗೆ ಒಟ್ಟು ರೂ. 39.00 ಲಕ್ಷ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.

ಇ) ಎ) 2005–06 ನೇ ಸಾಲಿನಲ್ಲಿ ಕುರುವತ್ತಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಸಿಂಹಾಸನ ಕಟ್ಟೆ ಮುಂಭಾಗದಲ್ಲಿ ಸದರಿ ದೇವಾಲಯದ ನಿಧಿಯಿಂದ ರೂ. 3.60 ಲಕ್ಷ ವೆಚ್ಚದಲ್ಲಿ ಕಾಂಕ್ರೀಟ್ ನೆಲಹಾಸು ಕಾಮಗಾರಿ ಕೈಗೊಂಡಿದೆ.

ಬಿ) ಇದೇ ದೇವಾಲಯಕ್ಕೆ ಸೇರಿದ ಜಾಗದಲ್ಲಿ ರೂ. 15.50 ಲಕ್ಷ ಅಂದಾಜು ವೆಚ್ಚದಲ್ಲಿ ದಾಸೋಹ ಭವನ ನಿರ್ಮಾಣ ಮಾಡಲು ಸರ್ಕಾರವು ಆದೇಶ ಸಂಖ್ಯೆ : ಕಂಇ 44 ಮುಅಕಾ 2005 ದಿನಾಂಕ 22–9–2006 ರಲ್ಲಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ.

ಸಿ) ಹೂವಿನ ಹಡಗಲಿ ತಾಲ್ಲೂಕು ಮೈಲಾರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಎರಡು ವಿಮಾನ ಗೋಪುರಗಳನ್ನು ಪುನರ್ ನಿರ್ಮಾಣ ಮಾಡಿ ಈ ಎರಡು ಗೋಪುರಗಳಿಗೆ ವರ್ಣ ಲೇಪನವನ್ನು ಮಾಡಿಸಲಾಗಿದೆ.

ಈ) ಶ್ರೀ ಕ್ಷೇತ್ರವೆಂದು ಘೋಷಿಸಲು ಯಾವುದೇ ಮಾನದಂಡ ನಿಗದಿಪಡಿಸಿರುವುದಿಲ್ಲ. ಆದರೆ ಈ ಕೆಳಕಂಡ ಹಿನ್ನೆಲೆ ಇರುವ ಧಾರ್ಮಿಕ ಸ್ಥಳಗಳನ್ನು ಶ್ರೀ ಕ್ಷೇತ್ರವೆಂದು ಕರೆಯುವ ಪ್ರತೀತ ಇರುತ್ತದೆ.

ಎ) ಋಷಿ ಮುನಿಗಳು ಶ್ರೀ ಕ್ಷೇತ್ರದಲ್ಲಿ ತಪಸ್ಸನ್ನು ಆಚರಿಸಿ ಆ ಭೂಮಿಯು ಪಾವನವಾಗಿರಬೇಕು.

ಬಿ) ತಪಸ್ಸನ್ನು ಆಚರಿಸುವ ಮುನಿಗಳಿಂದ ಅಥವಾ ಪುಣ್ಯ ಪುರುಷರಿಂದ ಪ್ರತಿಷ್ಠಾಪಿತವಾದ ಪ್ರಸಿದ್ಧ ದೇವಾಲಯವಿರಬೇಕು ಹಾಗೂ ಆ ಸಂಬಂಧವಾದ ಪುಣ್ಯ ತೀರ್ಥಗಳು ಹಾಗೂ ನದಿಗಳು ಹರಿಯುತ್ತಿರಬೇಕು.

ಸಿ) ಪುರಾಣ ಇತಿಹಾಸಗಳಲ್ಲಿ ಈ ಕ್ಷೇತ್ರದ ಮಹಿಮೆ ಒಳಗೊಂಡಿರಬೇಕು.

ಉ) ಇಲ್ಲ

ಊ) ಉಜ್ಜಯಿನಿ ಗ್ರಾಮದಲ್ಲಿ ಮುಜರಾಯಿ ಇಲಾಖೆ ವತಿಯಿಂದ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

1907 (2455) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡ್ಲಿಗಿ ತಾಲ್ಲೂಕು ಕೊಟ್ಟೂರು ಮತ ಕ್ಷೇತ್ರದ ತಿಮ್ಮಲಾಪುರ ಗ್ರಾಮ ಹಾಗೂ ಮೀನಕೆರೆ ಗ್ರಾಮದ ಬಳಿ ನೂತನ ವಿದ್ಯುತ್ ಸಬ್ ಸ್ಟೇಷನ್‌ಗಳನ್ನು ಪ್ರಾರಂಭಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಮತ್ತು ಆ) ಕೂಡ್ಲಿಗಿ ತಾಲ್ಲೂಕು ಕೊಟ್ಟೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೀನಕೆರೆಯಲ್ಲಿ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಲಹಾ ಸಮಿತಿಯಿಂದ ದಿನಾಂಕ 19–01–2007 ರಂದು ಅನುಮೋದನೆ ದೊರೆತಿರುತ್ತದೆ. ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ.

ಸದರಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತಿಮ್ಮಲಾಪುರದ ಸುತ್ತಾ ಮುತ್ತಾ ಇರುವ ಹನ್ಸಿ, ಹೊಸಹಳ್ಳಿ ಮತ್ತು ಕೋಗ್ಲಿ – ಈ ಸ್ಥಳಗಳಲ್ಲಿ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳು ಈಗ ಸ್ಥಾಪನೆಗೊಳ್ಳುತ್ತಿರುವುದರಿಂದ, ತಿಮ್ಮಲಾಪುರದಲ್ಲಿ ನೂತನ ವಿದ್ಯುತ್ ಉಪ ಕೇಂದ್ರದ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಹನ್ಸಿ, ಹೊಸಹಳ್ಳಿ ಮತ್ತು ಕೋಗ್ಲಿ ಗ್ರಾಮಗಳಲ್ಲಿ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, 2007–08 ರಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಈ ವಿದ್ಯುತ್ ಉಪ ಕೇಂದ್ರಗಳನ್ನು ಚಾಲನೆಗೊಳಿಸುವ ಗುರಿಯನ್ನು ಹೊಂದಲಾಗಿದೆ.

1909 (1465) ಶ್ರೀ ದೇಶಪಾಂಡೆ ಆರ್. ವಿ. (ಹಲಿಯಾಳ್) :–ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?